ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳು

೩೧೦ (೫೫೬) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಸರ್ಕಾರವು ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳನ್ನು ಹಂತ ಹಂತವಾಗಿ ಕಡಿಮೆಗೊಳಿಸುವುದಾಗಿ ಹೇಳಿದ್ದು ನಿಜವಲ್ಲವೇ ?

ಆ) ಈ ರೀತಿ ಹಂತ ಹಂತವಾಗಿ ಕಡಿಮೆಗೊಳಿಸಲಾಗಿದೆಯೇ?

ಇ) ಈಗ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ (ಅಫಿಲಿಯೇಷನ್) ಹೊಂದಲು ಅರ್ಜಿ ಸಲ್ಲಿಸಿದ ಖಾಸಗಿ ಕಾಲೇಜುಗಳ ಸಂಖ್ಯೆ ಎಷ್ಟು ?

ಈ) ಈ ಅರ್ಜಿಗಳಿಗೆ ಸಂಯೋಜನಾ ಸಮಿತಿ ಶಿಫಾರಸ್ಸು ನೀಡಿದೆಯೇ ? ಹಾಗಿದ್ದರೆ, ಯಾವ ಯಾವ ಕಾಲೇಜುಗಳಿಗೆ ನೀಡಲಾಗಿದೆ?

ಉ) ಕ್ಯಾಪಿಟೇಷನ್ ಆಧಾರಿತ ಹೊಸ ಕಾಲೇಜುಗಳನ್ನು ಸರ್ಕಾರದವರು ಈಗ ಮಾನ್ಯ ಮಾಡುತ್ತಿದ್ದಾರೆಯೇ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಮತ್ತು ಆ) ಕರ್ನಾಟಕ ರಾಜ್ಯ ಸರ್ಕಾರವು ಕ್ಯಾಪಿಟೇಷನ್ ಶುಲ್ಕ ರದ್ದುಗೊಳಿಸಲು ಆಶ್ವಾಸನೆ ನೀಡಿತ್ತು. ಅದರಂತೆ ಕ್ಯಾಪಿಟೇಷನ್ ಶುಲ್ಕವನ್ನು ದಿನಾಂಕ ೧೧-೭-೮೮ ರಿಂದ ರದ್ದುಗೊಳಿಸಲಾಗಿದೆ.

ಇ) ಆರು (೬).

ಈ) ಸಂಯೋಜನ ಸಮಿತಿ ಕೆಳಕಂಡ ಎರಡು ಕಾಲೇಜುಗಳಿಗೆ ಶಿಫಾರಸ್ಸು ಮಾಡಿದೆ.

೧) ಮುಸ್ಲಿಂ ಎಜ್ಯುಕೇಷನ್ ಟ್ರಸ್ಟ್, ಕಂದರ, ಮಂಗಳೂರು ಇವರ ಪ್ರಥಮ ದರ್ಜೆ ಕಾಲೇಜು.

೨) ನಿಟ್ಟೆ ಎಜ್ಯುಕೇಷನ್ ಟ್ರಸ್ಟ್, ತೇರಳಕಟ್ಟ, ಮಂಗಳೂರು, ಇವರ ವೈದ್ಯಕೀಯ ಕಾಲೇಜು.

ಆದರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯ ನಿಯಮ ೫೩ರ ರೀತ್ಯ ಸರ್ಕಾರ ಯಾವ ಕಾಲೇಜಿಗೂ ಇಲ್ಲಿಯ ತನಕ ಅನುಮತಿ ನೀಡಿರುವುದಿಲ್ಲ.

ಉ) ಇಲ್ಲ.

ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಖಾತೆಯ ಬಗ್ಗೆ

೩೧೧ (೫೫೨) ಶ್ರೀ ಪಿ.ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗಕ್ಕೆ ವಿದ್ಯುಕ್ತವಾದ ಮುಖ್ಯಸ್ಥರ ಸ್ಥಾನ ಖಾಲಿಯಾಗಿ ಆರು ವರ್ಷಗಳಾಗಿದ್ದರೂ ಇನ್ನೂ ಭರ್ತಿ ಮಾಡಿಲ್ಲದಿರುವುದಕ್ಕೆ ಕಾರಣವೇನು?

ಆ) ಅಲ್ಲಿ ಅತಿಥಿ ಉಪನ್ಯಾಸಕರನ್ನು ಕರೆಸುವುದರಲ್ಲಿ ಕೋಮು ರಾಜಕೀಯ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—